

# ಮರಳು ದಿಣ್ಣೆ

■ ಅನು ಬೆಳ್ಳೆ

## ಮರಳು ದಿಣ್ಣೆಯತ್ತ ದಾಪುಗಾಲು

'ಯಾವ ಫೈಲ್? ಇನ್‌ಕಂ ಟ್ಯಾಕ್ಸ್ ರಿಟರ್ನ್ ಫೈಲ್' ಅಬ್ಬರಿಸಿದ ಇನ್ಸ್‌ಪೆಕ್ಟರ್.

'ಸಾರ್, ಅದನ್ನ ನೀವು ಮನೆಗೆ ತಲುಪಿಸೋದಿಕ್ಕೆ ಹೇಳಿದ್ದಲ್ವೆ? ನಿನ್ನೆ ಬೆಳಿಗ್ಗೇನೆ ಅದನ್ನ ಮೇಡಂ ಕೈಯಲ್ಲಿ ಕೊಟ್ಟಿದ್ದೀನಿ' ಮುಗ್ಧತೆಯಿಂದ ಉತ್ತರಿಸಿದ ಸಾರಂಗ.

'ಬೇವಕೂಫ್, ಅದಲ್ಲೋ. ನಾನು ಕೇಳ್ತಾ ಇರೋ ಫೈಲ್ ಲಹರಿಯದ್ದು. ಅದೇ ಹುಡುಗಿ... ಈ ಮರಳು ದಿಣ್ಣೆಗೆ ಬಂದಿದ್ದೋಳು ಕಾಣೆಯಾಗಿದ್ದಾಳಲ್ವಾ? ಅವಳ ಫೈಲ್...'

'ಓ! ಅದಾ! ಆ ಫೈಲ್ ಇಲ್ಲೇ ನನ್ನ ಕೈಯಲ್ಲೇ ಇದೆಯಲ್ವೆ?' ಫೈಲನ್ನು ಎತ್ತರಿಸಿ ತೋರಿಸಿದ.

'ಸರಿ, ನಡಿ. ಕಾಕುಟ್ಟ ಪ್ರತ್ಯಕ್ಷನಾಗುವ ಮೊದಲು `ಬಂಡೆ' ಸೇರಿ ಬಿಡಬೇಕು. ಇಲ್ಲಾಂದ್ರೆ ಇವತ್ತಿನ ನಮ್ಮ ಪ್ಲಾನೆಲ್ಲಾ ಹಾಳಾಗುತ್ತೆ' ಮರಳು ದಿಣ್ಣೆಯ ನಡೆಗೆ ವೇಗ ದೊರಕಿತು. ಬಾಸ್‌ನ ಹೆಜ್ಜೆಗೆ ಸರಿದೂಗುವಂತೆ ಹೆಜ್ಜೆ ಹೊಂದಿಸಿ ನಡೆದ. ಮರಳಿನ ಮೇಲಿನ ನಡುಗೆ ಲಹರಿಯ ಕೇಸಿನಷ್ಟೇ ಜಟಿಲವಾಗಿತ್ತು.

'ಸಾರ್, ನಮ್ಮ ಡಿಪಾರ್ಟ್‌ಮೆಂಟ್‌ಗೂ ಒಂಟೆಯ ಗೊರಸಿನಂತಹ ಬೂಟ್ಸ್ ಇದ್ದಿದ್ದರೆ ವೇಗವಾಗಿ ನಡೆಯಬಹುದಿತ್ತು. ಇಲ್ಲದಿದ್ದರೆ ನಮ್ಮ ಪ್ಲಾನೆಲ್ಲಾ ಹಾಳಾಗಿ ಹೋಗುತ್ತೆ. ಸಮಯ ಪ್ರಜ್ಞೆ ನಮ್ಮ ಡಿಪಾರ್ಟ್‌ಮೆಂಟ್‌ಗೆ ಅಗತ್ಯ, ಅಲ್ವೆ?'

ಇನ್ಸ್‌ಪೆಕ್ಟರ್ ರಾಜಧಾನಿಗೆ ಕುಟುಕಿದಂತಾಯಿತು. ಸಮಯಪ್ರಜ್ಞೆಯ ಬಗ್ಗೆ ಬಹಳಷ್ಟು ಎಚ್ಚರ ವಹಿಸಿದ್ದರೂ ಹಿಂದಿನ ಎರಡು ಕೇಸುಗಳಲ್ಲಿಯೂ ಸೋಲನುಭವಿಸಬೇಕಾಗಿತ್ತು. ಆಗಲೂ ಸಾರಂಗನೇ ಸಹಾಯಕನಾಗಿ ಇರುತ್ತಿದ್ದರೆ ಚೆನ್ನಾಗಿತ್ತು. ಅವನಿಲ್ಲದಿದ್ದುದ್ದಕ್ಕೆ ತನ್ನನ್ನು ಕುಟುಕುತ್ತಿದ್ದಾನೆ.

'ನಡಿ, ಒಂಟೆಯ ಗೊರಸಿಗಿಂತ ನಿನ್ನ ಕಾಲಿಗೆ ಲಾಳ ಬಡಿಯುವುದೇ ಒಳ್ಳೆಯದು. ಒಂದೆರಡು ವರ್ಷ ನಿನ್ನಂತವರಿಗೆ ಮರುಭೂಮಿಯಲ್ಲಿ ಟ್ರೈನಿಂಗ್ ಕೊಡಿಸಿದ್ರೆ ಸರಿಯಾಗಿರ್ತಿತ್ತು. ಸಮಯಪ್ರಜ್ಞೆ ಇಲ್ಲದೋನ ತರ ಆಡ್ಬೇಡ' ವ್ಯಂಗ್ಯದ ದನಿಯಲ್ಲಂದಾಗ ಪಿಸಿ ತಲೆ ಕೆರೆದುಕೊಂಡ.

'ಕ್ಷಮಿಸಿ ಪ್ರಭು. ಯಾಕೆ, ಎರಡು ವರ್ಷ ನೀರಿಲ್ಲದ ಊರಿಗೆ ವರ್ಗಾವಣೆ ಮಾಡ್ಲಿದ್ದು ಸಾಲದೆ? ಅದಕ್ಕೆ ನಿಮ್ಮ ಹಿಂದಿನ ಎರಡು ಕೇಸ್‌ನಲ್ಲಿಯೂ ನೀವು ಸೋಲನುಭವಿಸಿದ್ದು'

ಪಿಸಿಯ ಮಾತಿಗೆ ರಾಜಧಾನಿಯ ಮುಖ ಗಂಭೀರವಾಯಿತು. ಸಮಾಧಾನ ಅವಶ್ಯ. ಪಿಸಿ ಸಾರಂಗನ ಕೈಗುಣ ಚೆನ್ನಾಗಿ ತಿಳಿದಿದ್ದ ಧೀರ ಅವನನ್ನು ಮತ್ತೆ ಕರೆಸಿಕೊಂಡಿದ್ದ.

'ಸುಮ್ನೆ ಇಲ್ಲದನ್ನೆಲ್ಲಾ ಕೆದಕಬೇಡ. ಈ ಕೇಸ್‌ನಲ್ಲಿ ನಾವು ಗೆಲ್ಲಲೇಬೇಕು. ಲಹರಿಯ ಕಣ್ಮರೆಯ ಹಿಂದೆ ಕಾಕುಟ್ಟನ ಕೈವಾಡವಿದೆಂತ ಪಾಂಬು ಕ್ಲೂ ಕೊಟ್ಟಿದ್ದಾನೆ. ನೋಡೋಣ, ಇವತ್ತು ಹೇಗೂ ನಮ್ಮ ಬೇಟೆ ಅನಾಯಾಸವಾಗಿ ಸಿಗುತ್ತೆ. ಆ ಭರವಸೆಯನ್ನೂ ಪಾಂಬು ಕೊಟ್ಟಿದ್ದಾನಲ್ಲವೆ?'